ಕಥೆ

# ಸುಬ್ರಮಣಿ



ಜಯಶ್ರೀ ಕಾಸರವಳ್ಳಿ

ಕಲೆ: ವಿಶ್ವನಾಥ್ ಎ.ಎಸ್

ನಾನು ಆಯವ್ವಳನ್ನು ಮೊದಲು ನೋಡಿದ್ದು ಮೂವತ್ತು ವರುಷಗಳ ಹಿಂದೆ. ಮೈಸೂರಿನ ಚೆಲುವಾಂಬಾ ಅಗ್ರಹಾರದ ಹತ್ತಿರ ಇನ್ನೇನು ಮುರಿದುಬೀಳುವಂತಿದ್ದ ಅವರ ಮುತ್ತಾತನ ಕಾಲದ ಪುರಾತನ ಮನೆಯ ಒಳಾಂಗಳದಲ್ಲಿ ಕಂಚಿನ ಹರಿವಾಣದಲ್ಲಿ ಸಕ್ಕರೆ ತುಪ್ಪ ಹಾಕಿಕೊಂಡು ಕಳಿತ ಬಾಳೆಹಣ್ಣುಗಳನ್ನು ಎತ್ತಲೋ ನಿಟ್ಟಿಸುತ್ತಾ ಒಬ್ಬಳೇ ತಿನ್ನುತ್ತಿದ್ದಂತಹ ಒಂದು ಮುಸ್ಸಂಜೆಯಲ್ಲಿ. ಹೊರಗಿನ ಮುಂಬಾಗಿಲು ಇಷ್ಟಗಲಕ್ಕೆ ತೆರೆದುಕೊಂಡಿತ್ತು. ನನ್ನ ಜೊತೆಯಿದ್ದ ಅಪ್ಪ ಮೊದಲು ಬಾಗಿಲ ಸರಪಣಿ ಹಿಡಿದು ಕಿಣಿಕಿಣಿ ಮಾಡಿದ್ದರು. ಯಾರೂ ಆಚೆ ಬಾರದಾಗ 'ತಾಯೀ' ಎಂದು ಆಯವ್ವಳನ್ನು ಕರೆದಿದ್ದರು. ಸ್ವಲ್ಪ ಹೊತ್ತು ಬಿಟ್ಟು, 'ಯಾರಿದ್ದೀರಾ?' ಎಂದು ಕೂಗಿದಾಗಲೇ ಆಯವ್ವಳಲ್ಲದೆ ಆ ಮನೆಯಲ್ಲಿ ಮತ್ಯಾರಾದರೂ ಇರಬಹುದೆನ್ನುವ ಒಂದು ಸಣ್ಣ ಅನುಮಾನ ನನ್ನ ಮನಸ್ಸಿನಲ್ಲಿ ಮೆಲ್ಲಗೆ ಸುಳಿದಾಡಿತ್ತೋ ಏನೋ. ಆದರೆ ಆ ವಿಷಯ ಮೈಸೂರಿನಲ್ಲಿ ಓದಲು ನನ್ನನ್ನು ಆಯವ್ವಳ ಮನೆಗೆ ಕಳುಹಿಸುವವರೆಗೂ ತಂದೆಗೂ ಗೊತ್ತಿದ್ದಂತೆ ಇರಲಿಲ್ಲ.

ಆದರೆ ಅಂದು ಈ ಸುಬ್ರಮಣಿಯ ದರ್ಶನ ನನಗಾಗಿರಲಿಲ್ಲ. ಸುಮಾರು ಹೊತ್ತು ಬಾಗಿಲು ಕೊಟಕೊಟ ಮಾಡುತ್ತಾ ಮೆಲ್ಲನಡಿಯಿಟ್ಟು ನಾವು ಒಳಗೆ ಹೋಗಿದ್ದೆವು. ಹೊರಗಿನ ಹಜಾರ, ನಡುಮನೆ, ಬಗಲಲ್ಲಿರುವ ಕತ್ತಲ ಅಸಂಖ್ಯ ಕೋಣೆಗಳನ್ನು ಹಾದು, ದೇವರಮನೆ ದಾಟಿ, ತುಳಸಿಕಟ್ಟೆಯ ಈ ಅಂಗಳಕ್ಕೆ ಬಂದಿದ್ದೆವು.

ಆಗಲೇ ಇನ್ನು ಮುಂದೆ ಇಂತಹದೊಂದು ಮನೆಯಲ್ಲಿ ನಾನಿರಬೇಕೇ ಎಂದು ಒಂದು ಸಣ್ಣ ಚಡಪಡಿಕೆ ಶುರುವಾಗಿತ್ತು. ಅದು ಈ ಮೊದಲು ಇರಲಿಲ್ಲವೆಂದಲ್ಲ. ಮೇಲುಕೋಟೆಯಲ್ಲಿ ನನ್ನ ಹೈಸ್ಕೂಲು ಮುಗಿಯುತ್ತಿದ್ದ ಹಾಗೇ ಮನದೊಳಗೆ ಇಂತಹದೊಂದು ಹೆದರಿಕೆ ಹುಟ್ಟಿಕೊಂಡಿತ್ತು. ಮನೆಯಲ್ಲಿ ನನ್ನ ಮುಂದಿನ ವಿದ್ಯಾಭ್ಯಾಸ ಕುರಿತು ಅಪ್ಪ, ಅಮ್ಮ ಚರ್ಚಿಸುವಾಗಲೆಲ್ಲಾ ಬಾಗಿಲ ಮರೆಯಲ್ಲಿ ನಿಂತು ಕೇಳಿಸಿಕೊಳ್ಳುತ್ತಿದ್ದೆ.

ಅಪ್ಪನ ದೂರದ ಸಂಬಂಧಿ ಆಯವ್ವ ಗಂಡ ಬಿಟ್ಟು ಹೋದ ನಂತರ ತನ್ನಪ್ಪನ ದೊಡ್ಡ ಮನೆಯಲ್ಲಿ ಒಬ್ಬಳೇ ಬಂದು ನೆಲೆ ನಿಂತಿರುವ ಕತೆ ಕೇಳುವಾಗೆಲ್ಲಾ ವಿಚಿತ್ರ ನಡುಕವೊಂದು ನನ್ನಿಡೀ ದೇಹವನ್ನು ಆಕ್ರಮಿಸಿಕೊಳ್ಳುತ್ತಿತ್ತು. ದೊಡ್ಡ ಮನೆ, ದೊಡ್ಡ ಅಂಗಳ, ಅಲ್ಲೊಬ್ಬಳು ನಡು ವಯಸ್ಸಿನ ಒಂಟಿ ಹೆಣ್ಣು ಎಂಬ ಕಲ್ಪನೆಯೇ ಗಾಬರಿ ಹುಟ್ಟಿಸುತ್ತಿತ್ತು. ಅದರೆ ಕಾಲೇಜು ಸೇರಿ ಮುಂದೆ ಓದಬೇಕೆಂಬ ನನ್ನ ಹಂಬಲವೂ ಅಷ್ಟೇ ತೀವ್ರವಾಗಿತ್ತು. ಜೊತೆಗೆ ಮೈಸೂರು ಪಟ್ಟಣವಾಗಿರುವುದರಿಂದ ಯಾರಾದರೂ ಇದ್ದೇ ಇರುತ್ತಾರೆಂಬ ಅಪಾರ ನಂಬಿಕೆ.